**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ರಾಣೇಬೆನ್ನೂರು.**

**ಸಿಸಿ ನಂಬರಃ 67/2024**

ಸಿ ಡಬ್ಲ್ಯೂ -9

ಪಿ ಡಬ್ಲ್ಯೂ-6

| | | |
|---|---|---|
| **ಸಾಕ್ಷಿದಾರರ ಹೆಸರು** | : | ಗುಡ್ಡೇಶ |
| **ತಂದೆ/ಗಂಡನ ಹೆಸರು** | : | ಬಸಪ್ಪ ಸಣ್ಣಪ್ಪನವರ |
| **ವಯಸ್ಸು** | : | 43 ವರ್ಷ |
| **ಉದ್ಯೋಗ** | : | ಹಮಾಲಿ |
| **ವಾಸ** | : | ರಾಣೇಬೆನ್ನೂರು |

**ದಿನಾಂಕಃ 22-01-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ನಾನು ಕೆ ಎಫ್ ಸಿ ಎಸ್ ಸಿ ರಾಣೇಬೆನ್ನೂರಿನಲ್ಲಿ ಹಮಾಲಿಯಾಗಿ ಸುಮಾರು 12-13 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. 2022 ರಲ್ಲಿ ಒಂದು ದಿವಸ ಮಾಮೂಲಿಯಂತೆ ನಾವು ಕೆ ಎಫ್ ಸಿ ಎಸ್ ಸಿ ಯಲ್ಲಿ ಕೆಲಸ ಮಾಡುತ್ತಿದ್ದಾಗ ಆಹಾರ ನಿರೀಕ್ಷಕರು ರಾಣೇಬೆನ್ನೂರು ಹಾಗೂ ಗ್ರಾಮಾಂತರ ಪೋಲಿಸ್ ಠಾಣೆಯ ಪೋಲಿಸರು ಅಕ್ಕಿ ಲೋಡ್ ಮಾಡಿರುವ ಲಾರಿಯನ್ನು ಕೆ ಎಫ್ ಸಿ ಎಸ್ ಸಿ ಗೋಡಾನ್ ಗೆ ತಂದರು. ಆಗ ಅವರು ನಮಗೆ ಅದನ್ನು ಅನಲೋಡ್ ಮಾಡಿ ಎಂದು ಹೇಳಿದಾಗ ನಾನು ಹಾಗೂ ಚಾಸಾ-6 ರಿಂದ 8 ಹಾಗೂ 10 ರವರು ಸೇರಿಕೊಂಡು ಅಕ್ಕಿಯ ಚೀಲಗಳನ್ನು ಅನಲೋಡ್ ಮಾಡಿರುತ್ತೇವೆ. ಲಾರಿಯಲ್ಲಿ ತುಂಬಿದ್ದ ಚೀಲಗಳಲ್ಲಿ ಪಡಿತರ ಅಕ್ಕಿ ತುಂಬಿತ್ತು. ಆ ಲಾರಿಯಲ್ಲಿ 350 ಅಕ್ಕಿಯ ಚೀಲಗಳನ್ನು ತುಂಬಲಾಗಿತ್ತು. ಆಗ ಆರೋಪಿತ ದೀಪಕ್ ಅಕ್ಕಿ ಖರೀದಿಸಿದ ರಶೀದಿಗಳನ್ನು ತೋರಿಸಿ ಆಹಾರ ನಿರೀಕ್ಷಕರ ಜೊತೆ ಚರ್ಚೆ ಮಾಡುತ್ತಿದ್ದರು. ನಂತರ ಅಲ್ಲಿಂದ ಆರೋಪಿತನು ಹೋಗಿರುತ್ತಾನೆ. ನಂತರ ನಾವು ಅಕ್ಕಿಯ ಚೀಲಗಳನು ಅನ್ ಲೋಡ್ ಮಾಡಿದ ನಂತರ ನಾವು ಬೇರೆ ಕೆಲಸಕ್ಕೆ ಹೋಗಿರುತ್ತೇವೆ. ಆ ಅಕ್ಕಿ ಎಲ್ಲಿತ್ತು ಯಾರು ಸಾಗಾಣಿಕೆ ಮಾಡುತ್ತಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಈ ಬಗ್ಗೆ ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

( ಈ ಹಂತದಲ್ಲಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ಅವರು ನಿವೇದಿಸಿಕೊಂಡಿದ್ದು ಸದರಿ ನಿವೇದನೆಯನ್ನು ಪರಿಗಣಿಸಿ ಸ.ಸ.ಅ ಅವರಿಗೆ ಪಾಟೀ

ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ`**

ಆರೋಪಿತ ದಿನಾಂಕ 14-06-2022 ರಂದು ಲಾರಿಯಲ್ಲಿ ಪಡಿತರ ಅಕ್ಕಿಯನ್ನು ತುಂಬಿರುವ 334 ಚೀಲಗಳನ್ನು ಲೋಡ್ ಮಾಡಿಕೊಂಡು ಅಕ್ರಮವಾಗಿ ಸಾಗಾಣಿಕೆ ಮಾಡಿಕೊಂಡು ಹೋಗುತ್ತಿದ್ದಾಗ ಚಾಸಾ-1 ಹಾಗೂ ಇತರ ಕಂದಾಯ ಇಲಾಖಾ ಅಧಿಕಾರಿಗಳು ಹಿಡಿದು ಅದನ್ನು ಅಮಾನತುಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ ಈ ವಿಚಾರವಾಗಿ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿತನ ಪರ ಶ್ರೀ ಎಸ್ ಎ ಕೆ ವಕೀಲರಿಂದಃ**

ನಾನು ಕೆ ಎಫ್ ಸಿ ಎಸ್ ಸಿ ಗೋಡಾನ್ ನಲ್ಲಿ ಖಾಯಂ ಆಗಿ ಹಮಾಲಿ ಕೆಲಸ ಮಾಡುತ್ತೇನೆ ಎಂದರೆ ನಿಜ. ಚಾಸಾ-1,4 ರವರು ನನಗೆ ಗೊತ್ತು. ಅಕ್ಕಿ ಲೋಡ್ ಮಾಡಿರುವ ಲಾರಿಯನ್ನು ಚಾಸಾ-1 ರವರು ಗೋಡಾನ್ ಗೆ ತಂದರು ಎಂದರೆ ನಾನು ಸಹ ಲಾರಿ ಹಿಡಿದಿದ್ದ ಸ್ಥಳಕ್ಕೆ ಹೋಗಿದ್ದೇನು. ನನ್ನನ್ನು ಚಾಸಾ-4 ರವರು ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು. ಆರೋಪಿತ ಚಾಸಾ-1 ಮತ್ತು 4 ರವರಿಗೆ ರಶೀದಿಗಳನ್ನು ತೋರಿಸಿ ಮಾತನಾಡುತ್ತಿದ್ದರು ಎಂದರೆ ನಿಜ. ನಂತರ ಚಾಸಾ-1,4 ರವರು ಆರೋಪಿತನಿಗೆ ಎನು ಹೇಳಿದರು ಎಂದರೆ ನಾನು ಕೇಳಿಲ್ಲ. ಆ ಗೋಡಾನ್ ನ ಮ್ಯಾನೇಜರ್ ಗೂ ಸಹ ಆ ರಶೀದಿಗಳನ್ನು ತೋರಿಸುತ್ತಿದ್ದರು ಎಂದರೆ ನಿಜ. ಆ ಅಕ್ಕಿ ದಾಳಿ ಮಾಡಿದ ಸ್ಥಳದಿಂದ ಮತ್ತು ಗೋಡಾನ್ ಗೆ ಲಾರಿಯನ್ನು ತೆಗೆದುಕೊಂಡು ಬಂದಾಗ ಒಡಿ ಹೋಗಲು ಪ್ರಯತ್ನಿಸಿಲ್ಲ ಎಂದರೆ ಸರಿಯಲ್ಲ. ಪಡಿತರ ಅಕ್ಕಿಯ ಬಗ್ಗೆ ನನಗೆ ಮಾಹಿತಿ ಇದೆ. ನಾನು ಪೋಲಿಸರಿಗೆ ಈ ಕೇಸಿನ ಬಗ್ಗೆ ಹೇಳಿಕೆ ಕೊಟ್ಟಿದ್ದೀರಾ ಎಂದರೆ ಇಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಬಿ.ಸಿದ್ದರಾಜು)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.